## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

**ಗ್ರಾಮೀಣ ಕೃಷಿ ಹವಾಮಾನ ಸೇವಾ**
**ಕೃಷಿ ಹವಾಮಾನಕ್ಷೇತ್ರ ವಿಭಾಗ(IMD)**
**ನಾಗನಹಳ್ಳಿ, ಮೈಸೂರು 570 003**

ದಿನಾಂಕ: 16-04-2024

# ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಚಾಮರಾಜನಗರ ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

**ಹವಾಮಾನದ ಮುನ್ಸೂಚನೆ (17–04–2024 ರಿಂದ 21–04–2024)**

| Parameter | 17.04.2024 | 18.04.2024 | 19.04.2024 | 20.04.2024 | 21.04.2024 |
|---|---|---|---|---|---|
| ಮಳೆ (ಮಿ.ಮೀ) | 0 | 1 | 1 | 4 | 1 |
| ಗರಿಷ್ಠ ಉಷ್ಣಾಂಶ ($^0$ಸೆ) | 38.5 | 38.9 | 37 | 37.5 | 37.8 |
| ಕನಿಷ್ಠ ಉಷ್ಣಾಂಶ ($^0$ಸೆ) | 20.7 | 20.8 | 20.2 | 20.6 | 21 |
| ಮೋಡ (ಆಕ್ಟ್‌ಸ್) | 7 | 6 | 6 | 7 | 6 |
| ಗರಿಷ್ಠ ಗಾಳಿಯ ತೇವಾಂಶ (%) | 67 | 78 | 69 | 64 | 68 |
| ಕನಿಷ್ಠ ಗಾಳಿಯ ತೇವಾಂಶ (%) | 19 | 22 | 26 | 23 | 24 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 10 | 10 | 7 | 9 | 8 |
| ಗಾಳಿಯ ದಿಕ್ಕು (ಡಿಗ್ರಿ) | 199 | 112 | 248 | 236 | 202 |

**ಮುನ್ಸೂಚನೆಯ ಸಾರಾಂಶ:**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಚಾಮರಾಜನಗರ ಜಿಲ್ಲೆಯಲ್ಲಿ ದಿನಾಂಕ: 17–04–2024 ರಿಂದ 21–04–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಹಗುರ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 37–38.9°C. ಮತ್ತು ಕನಿಷ್ಠ ಉಷ್ಣಾಂಶ 20.2–21°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 64–78% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 19–26% ವರೆಗೆ ಮತ್ತು ಗಾಳಿಯು ಗಂಟೆಗೆ 7–10 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

**ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:**

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

- **ನೀರಿನ ನಿರ್ವಹಣೆ:** ಬೆಳೆಗಳಿಗೆ ಸಮರ್ಪಕ ನೀರು ಪೂರೈಕೆಯನ್ನು ಖಚಿತಪಡಿಸಿಕೊಳ್ಳಿ. ಆವಿಯಾಗುವಿಕೆಯ ಮೂಲಕ ನೀರಿನ ನಷ್ಟವನ್ನು ಕಡಿಮೆ ಮಾಡಲು ಹನಿ ನೀರಾವರಿಯಂತಹ ಸಮರ್ಥ ನೀರಾವರಿ ವ್ಯವಸ್ಥೆಗಳನ್ನು ಅಳವಡಿಸಿ.
- **ಬೆಳೆ ಆಯ್ಕೆ:** ಹೆಚ್ಚಿನ ತಾಪಮಾನವನ್ನು ತಡೆದುಕೊಳ್ಳುವ ಬರ–ನಿರೋಧಕ ಅಥವಾ ಶಾಖ–ಸಹಿಷ್ಣು ಬೆಳೆ ಪ್ರಭೇದಗಳನ್ನು ಆಯ್ಕೆಮಾಡಿ.
- **ಕೃಷಿ ಚಟುವಟಿಕೆಗಳ ಸಮಯ:** ಸಸ್ಯಗಳ ಮೇಲಿನ ಶಾಖದ ಒತ್ತಡವನ್ನು ಕಡಿಮೆ ಮಾಡಲು ಮತ್ತು ನೀರಿನ ಆವಿಯಾಗುವಿಕೆಯನ್ನು ಕಡಿಮೆ ಮಾಡಲು ದಿನದ ತಂಪಾದ ಭಾಗಗಳಲ್ಲಿ, ಸಾಮಾನ್ಯವಾಗಿ ಮುಂಜಾನೆ ಅಥವಾ ಸಂಜೆ ನೆಡುವಿಕೆ, ನೀರುಹಾಕುವುದು ಮತ್ತು ಕೊಯ್ಲು ಮಾಡುವಂತಹ ಕೃಷಿ ಚಟುವಟಿಕೆಗಳನ್ನು ನಿಗದಿಪಡಿಸಿ.
- **ಮಲ್ಚಿಂಗ್:** ಮಣ್ಣಿನ ತೇವಾಂಶವನ್ನು ಉಳಿಸಿಕೊಳ್ಳಲು ಮತ್ತು ಮಣ್ಣಿನ ತಾಪಮಾನವನ್ನು ನಿಯಂತ್ರಿಸಲು ಮಲ್ಚ್ ಅನ್ನು ಅನ್ವಯಿಸಿ. ಮಲ್ಚಿಂಗ್ ಕಳೆ ಬೆಳವಣಿಗೆಯನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ, ನೀರಿನ ಸ್ಪರ್ಧೆಯನ್ನು ಕಡಿಮೆ ಮಾಡುತ್ತದೆ.
- ಉಸ್ತುವಾರಿ: ಶಾಖದ ಒತ್ತಡ ಅಥವಾ ನಿರ್ಜಲೀಕರಣದ ಚಿಹ್ನೆಗಳನ್ನು ಮೊದಲೇ ಪತ್ತೆಹಚ್ಚಲು ಮಣ್ಣಿನ ತೇವಾಂಶ ಮಟ್ಟಗಳು, ಬೆಳೆಗಳ ಆರೋಗ್ಯ ಮತ್ತು ಪ್ರಾಣಿಗಳ ನಡವಳಿಕೆಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ.
- **ಜಾನುವಾರು ನಿರ್ವಹಣೆ:** ಸಾಕಷ್ಟು ಗಾಳಿ ಮತ್ತು ಜಾನುವಾರುಗಳಿಗೆ ಶುದ್ಧ ನೀರು ಮತ್ತು ನೆರಳಿನ ಪ್ರವೇಶವನ್ನು ಖಚಿತಪಡಿಸಿಕೊಳ್ಳಿ. ದಿನದ

<table>
<tr><td colspan="3">ಬಿಸಿಯಾದ ಭಾಗಗಳಲ್ಲಿ ಪ್ರಾಣಿಗಳನ್ನು ಚಲಿಸುವುದನ್ನು ತಪ್ಪಿಸಿ.<br>• ಕೋಳಿ: ಪಕ್ಷಿಗಳ ಮೇಲೆ ಶಾಖದ ಒತ್ತಡವನ್ನು ಕಡಿಮೆ ಮಾಡಲು ಕೋಳಿ ಮನೆಗಳು ಚೆನ್ನಾಗಿ ಗಾಳಿ ಮತ್ತು ಸಾಕಷ್ಟು ನೆರಳು ಒದಗಿಸುತ್ತವೆ ಎಂದು ಖಚಿತಪಡಿಸಿಕೊಳ್ಳಿ. ಪರಿಸರವನ್ನು ತಂಪಾಗಿಸಲು ಫ್ಯಾನ್ ಅಥವಾ ಮಿಸ್ಟಿಂಗ್ ಸಿಸ್ಟಮ್‌ಗಳನ್ನು ಸ್ಥಾಪಿಸಿ. ಪಕ್ಷಿಗಳಿಗೆ ಕುಡಿಯಲು ತಂಪಾದ, ತಾಜಾ ನೀರಿನ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಿ. ಪಕ್ಷಿಗಳು ಶಾಖದ ಒತ್ತಡವನ್ನು ನಿಭಾಯಿಸಲು ಸಹಾಯ ಮಾಡಲು ನೀರಿಗೆ ವಿದ್ಯುದ್ವಿಚ್ಛೇದ್ಯಗಳು ಅಥವಾ ವಿಟಮಿನ್ಗಳನ್ನು ಸೇರಿಸುವುದನ್ನು ಪರಿಗಣಿಸಿ<br>• ಎರೆಹುಳು ಗೊಬ್ಬರ: ಮುಂದಿನ ಐದು ದಿನಗಳವರೆಗೆ ಶುಷ್ಕ ಹವಾಮಾನವನ್ನು ಊಹಿಸಲಾಗಿದೆ, ವರ್ಮಿಕಾಂಪೋಸ್ಟ್ ಹೊಂಡಗಳಲ್ಲಿ 60% ನಷ್ಟು ತೇವಾಂಶದ ಮಟ್ಟವನ್ನು ಕಾಪಾಡಿಕೊಳ್ಳಲು ಕಾಳಜಿಯನ್ನು ತೆಗೆದುಕೊಳ್ಳಬೇಕು.</td></tr>
<tr><td>ಬಾಳೆ</td><td>ಹುಸಿಕಾಂಡ ಕೊರಕ</td><td>ಮರಿ ಹುಳುಗಳು ಹುಸಿ ಕಾಂಡವನ್ನು ಕೊರೆಯುತ್ತವೆ. ಹುಸಿ ಕಾಂಡದ ಮೇಲೆ ರಂಧ್ರಗಳಿದ್ದು ಗಾಳಿಬೀಸಿದಾಗ ಮರಗಳು ಆ ಭಾಗಕ್ಕೆ ಸರಿಯಾಗಿ ಮುರಿಯುತ್ತವೆ.<br>ಈ ಹುಳು ಬಾಧಿತ ಹುಸಿ ಕಾಂಡಕ್ಕೆ ಭೂಮಿಯಿಂದ ಒಂದು ಅಡಿ ಎತ್ತರದಲ್ಲಿ 3.0 ಮಿಲೀ. ಕ್ಲೋರೋಪೈರಿಫಾಸ್ 20 ಇಸಿ. ಅಥವಾ 3.0 ಮಿಲೀ. ಡೈಮಿಥೋಯೇಟ್ 30 ಇಸಿ. ಯನ್ನು 5.0 ಮಿಲೀ. ನೀರಿಗೆ ಸೇರಿಸಿ ಪಿಚಕಾರಿಯ ಸಹಾಯದಿಂದ ಕಾಂಡಕ್ಕೆ ಚುಚ್ಚುವುದು.</td></tr>
<tr><td>ಅಲಸಂದೆ</td><td>ಸಸ್ಯಹೇನು</td><td>ನೂರಾರು ಸಸ್ಯಹೇನುಗಳು ಸುಳಿ, ಎಲೆ, ಹೂ, ಮೊಗ್ಗು, ಕಾಯಿಗಳಿಂದ ರಸ ಹೀರುತ್ತಿರುತ್ತವೆ. ಎಲೆಗಳು ಮುದುಡುವುದು, ಕಾಯಿಗಳಲ್ಲಿನ ಬೀಜ ಚೀಕಲಾಗುವುದು. ಕೆಳಗಿನ ಎಲೆಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು. ಕೀಟ ಬಾದೆ ಕಾಣಿಸಿಕೊಂಡಾಗ ಲೀ. ನೀರಿಗೆ 1.7 ಮಿ.ಲೀ.ಡೈಮಿಥೋಯೇಟ್ 30 ಇಸಿ. ಅಥವಾ ಅಜಾಡಿರಕ್ಟಿನ್ 1500 ppm @ 5ಮಿಲಿ/ಲೀಟರ್ ಸೇರಿಸಿ ಸಿಂಪಡಿಸುವುದು. ಎಕರೆಗೆ 200 ಲೀ. ಸಿಂಪರಣಾ ದ್ರಾವಣವನ್ನು ಬೇಕಾಗುತ್ತದೆ.</td></tr>
<tr><td>ತೆಂಗು</td><td>ಗರಿತಿನ್ನುವ ಕಪ್ಪು ತಲೆ ಕಂಬಳಿ ಹುಳು</td><td>ಮರಿ ಹುಳುಗಳು ಗರಿಗಳ ತಳಭಾಗದಲ್ಲಿದ್ದು ಗರಿಗಳನ್ನು ಕೆರೆದು ತಿನ್ನುತ್ತವೆ.<br>ಮರಿ ಹುಳುಗಳು ರೇಷ್ಮೆಯಂತೆ ಜಾಡಿನ ಬಲೆಯಲ್ಲಿರುತ್ತವೆ.<br>ರೇಷ್ಮೆ ಜಾಡಿನಲ್ಲಿ ಮರಿ ಹುಳುಗಳ ಹಿಕ್ಕೆಗಳು ಇದ್ದು ಬಾದೆಗೊಳಗಾದ ಗರಿಗಳು/ತೋಟಗಳು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ.<br>ಪೀಡೆ ಬಾಧೆ ತೀವ್ರತೆಯಾದಲ್ಲಿ ಸಾಮೂಹಿಕವಾಗಿ ಮಾನೋಕ್ರೋಟೋಫಾಸ್ 36 ಎಸ್. ಎಲ್ ಕೀಟನಾಶಕವನ್ನು ಬೇರಿನ ಮೂಲಕ ಮರಗಳಿಗೆ ಉಣಿಸಬೇಕು.<br>ವಿಧಾನ : ಮರದಿಂದ ಒಂದು ಮೀಟರ್ ಅಂತರದಲ್ಲಿ ಒಂದು ಬಲಿತ ಪೆನ್ಸಿಲ್ ಗಾತ್ರದ ಕಂದು ಬಣ್ಣದ ಬೇರನ್ನು ಅಗೆದು ತೆಗೆದು ಅದರ ತುದಿಯನ್ನು ಓರೆಯಾಗಿ ಕತ್ತರಿಸಿ, ನಾಲ್ಕು ಸೆಂ. ಮೀ. ಅಗಲ 15 ಸೆಂ. ಮೀ. ಉದ್ದದ ಪ್ಲಾಸ್ಟಿಕ್ ಚೀಲದಲ್ಲಿ 7.5 ರಿಂದ 10 ಮಿ. ಲೀ ಮಾನೋಕ್ರೋಟೋಫಾಸ್ 36 ಎಸ್. ಎಲ್ ಗೆ ಅಷ್ಟೇ ಪ್ರಮಾಣದ ನೀರನ್ನು ಸೇರಿಸಿ ತಯಾರಿಸಿದ ದ್ರಾವಣದಲ್ಲಿ ಕತ್ತರಿಸಿದ ಬೇರಿನ ಭಾಗವನ್ನು ಮುಳುಗುವಂತೆ ಊರಿ, ಪ್ಲಾಸ್ಟಿಕ್ ಚೀಲದ ಬಾಯನ್ನು ದಾರದಿಂದ ಕಟ್ಟಬೇಕು.<br>ಈ ರೀತಿಯಲ್ಲಿ ಮಾಡಿದ 24 ಗಂಟೆಗಳಲ್ಲಿ ಬೇರಿನ ಮೂಲಕ ಕೀಟನಾಶಕವನ್ನು ಮರ ಹೀರಿಕೊಳ್ಳುತ್ತದೆ. ಹೀರಿಕೊಳ್ಳದಿದ್ದರೆ 48 ಗಂಟೆಗಳ ನಂತರ ಬೇರೆ ಬೇರಿನಿಂದ ಕೀಟನಾಶಕವನ್ನು ಉಣಿಸಬೇಕಾಗುತ್ತದೆ. ಕೀಟನಾಶಕ ಬಳಸಿದ 30 ದಿನಗಳವರೆಗೂ ಎಳನೀರು/ಕಾಯಿಗಳನ್ನು ಬಳಸಬಾರದು.</td></tr>
<tr><td>ಬೇಸಿಗೆ ತಿಂಗಳಲ್ಲಿ ಪಶು ಸಂಗೋಪನಾ ಸಲಹೆಗಳು</td><td colspan="2">• ಬಿಸಿಲು ಹೆಚ್ಚಾಗಿರುವುದರಿಂದ ಮಧ್ಯಾಹ್ನದಲ್ಲಿ ರಾಸುಗಳಿಗೆ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>• ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಹಾಡುವಂತೆ ವ್ಯವಸ್ಥೆ ಮಾಡಬೇಕು.<br>• ಸ್ವಚ್ಛವಾದ ನೀರನ್ನು ಕುಡಿಸಬೇಕು.<br>• ರಾಸುಗಳನ್ನು ಮಧ್ಯಾಹ್ನದ ಬಿಸಿಲಿಗೆ ಮೇಯಲು ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ಮೇಯಲು ಬಿಡಬೇಕು.</td></tr>
</table>

ತಾಲ್ಲೂಕುವಾರು ಹವಾಮಾನದ ಮುನ್ಸೂಚನೆ (17-04-2024 ರಿಂದ 21-04-2024)

| ಚಾಮರಾಜನಗರ | | | | | |
|---|---|---|---|---|---|
| Parameter | 17.04.2024 | 18.04.2024 | 19.04.2024 | 20.04.2024 | 21.04.2024 |
| ಮಳೆ (ಮಿ.ಮೀ) | 0 | 0.2 | 0.2 | 0.3 | 0.3 |
| ಗರಿಷ್ಠ ಉಷ್ಣಾಂಶ (°ಸೆ) | 31.7 | 31.4 | 30.8 | 31 | 30 |
| ಕನಿಷ್ಠ ಉಷ್ಣಾಂಶ (°ಸೆ) | 17.8 | 18.6 | 19.1 | 20.7 | 20 |
| ಮೋಡ (ಆಕ್ಟ್‌ಸ್) | 4 | 6 | 7 | 8 | 7 |
| ಗರಿಷ್ಠ ಗಾಳಿಯ ತೇವಾಂಶ (%) | 66 | 81 | 84 | 66 | 69 |
| ಕನಿಷ್ಠ ಗಾಳಿಯ ತೇವಾಂಶ (%) | 17 | 24 | 32 | 28 | 30 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 10 | 10 | 10 | 8 | 10 |
| ಗಾಳಿಯ ದಿಕ್ಕು( ಡಿಗ್ರಿ) | 248 | 259 | 207 | 281 | 250 |

| ಗುಂಡ್ಲುಪೇಟೆ | | | | | |
|---|---|---|---|---|---|
| Parameter | 17.04.2024 | 18.04.2024 | 19.04.2024 | 20.04.2024 | 21.04.2024 |
| ಮಳೆ (ಮಿ.ಮೀ) | 0 | 0.2 | 0.1 | 0.4 | 0.3 |
| ಗರಿಷ್ಠ ಉಷ್ಣಾಂಶ (°ಸೆ) | 31.3 | 31.7 | 30.6 | 30.7 | 29.7 |
| ಕನಿಷ್ಠ ಉಷ್ಣಾಂಶ (°ಸೆ) | 17.8 | 18.6 | 19.5 | 20.6 | 20.3 |
| ಮೋಡ (ಆಕ್ಟ್‌ಸ್) | 4 | 5 | 7 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 73 | 83 | 86 | 67 | 68 |
| ಕನಿಷ್ಠ ಗಾಳಿಯ ತೇವಾಂಶ (%) | 17 | 22 | 30 | 26 | 30 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 12 | 11 | 7 | 9 | 9 |
| ಗಾಳಿಯ ದಿಕ್ಕು( ಡಿಗ್ರಿ) | 248 | 251 | 270 | 245 | 250 |

| ಕೊಳ್ಳೇಗಾಲ | | | | | |
|---|---|---|---|---|---|
| Parameter | 17.04.2024 | 18.04.2024 | 19.04.2024 | 20.04.2024 | 21.04.2024 |
| ಮಳೆ (ಮಿ.ಮೀ) | 0 | 0.2 | 0.2 | 0.4 | 0.4 |
| ಗರಿಷ್ಠ ಉಷ್ಣಾಂಶ (°ಸೆ) | 34.8 | 34.5 | 33.8 | 33.9 | 33.5 |
| ಕನಿಷ್ಠ ಉಷ್ಣಾಂಶ (°ಸೆ) | 19.4 | 20.4 | 20.9 | 22.4 | 21.9 |
| ಮೋಡ (ಆಕ್ಟ್‌ಸ್) | 3 | 6 | 6 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 72 | 80 | 79 | 66 | 69 |
| ಕನಿಷ್ಠ ಗಾಳಿಯ ತೇವಾಂಶ (%) | 15 | 23 | 28 | 26 | 28 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 10 | 9 | 8 | 8 | 10 |
| ಗಾಳಿಯ ದಿಕ್ಕು( ಡಿಗ್ರಿ) | 243 | 285 | 240 | 259 | 255 |

| ಯಳಂದೂರು | | | | | |
|---|---|---|---|---|---|
| **Parameter** | **17.04.2024** | **18.04.2024** | **19.04.2024** | **20.04.2024** | **21.04.2024** |
| ಮಳೆ (ಮಿ.ಮೀ) | 0 | 0.3 | 0.2 | 0.4 | 0.3 |
| ಗರಿಷ್ಠ ಉಷ್ಣಾಂಶ (°ಸೆ) | 33 | 32.6 | 31.9 | 31.9 | 31.2 |
| ಕನಿಷ್ಠ ಉಷ್ಣಾಂಶ (°ಸೆ) | 18.3 | 19.1 | 19.6 | 21.1 | 20.6 |
| ಮೋಡ (ಆಕ್ಟ್ಸ್) | 3 | 6 | 7 | 8 | 8 |
| ಗರಿಷ್ಠ ಗಾಳಿಯ ತೇವಾಂಶ (%) | 71 | 82 | 82 | 67 | 70 |
| ಕನಿಷ್ಠ ಗಾಳಿಯ ತೇವಾಂಶ (%) | 16 | 23 | 29 | 27 | 30 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 10 | 10 | 10 | 8 | 10 |
| ಗಾಳಿಯ ದಿಕ್ಕು( ಡಿಗ್ರಿ) | 248 | 285 | 214 | 285 | 261 |

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು"ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ.ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. **08212591267/ 9535345814** ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು